# ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ.

2 ನೇ ಮಹಡಿ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣದ ಹತ್ತಿರ, ಕೆಂಪೇಗೌಡ ರಸ್ತೆ, ಬೆಂಗಳೂರು- 560 009,

ದೂ : 080 22114233, ಫ್ಯಾಕ್ಸ್ 22133558 ಈ ಮೇಲ್ : cmdkplc@gmail.com


ಕ್ರ. ಕೆ.ಪಿ.ಎಲ್.ಸಿ./ಲೆಕ್ಕ/ಸಿಆರ್/37/2012-13 ದಿ : 01-9-2014,

## : ಅಧಿಕೃತ ಜ್ಞಾಪನ :

ವಿಷಯ : ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ, ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ,ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ,

ಉಲ್ಲೇಖ : 1. ಸರ್ಕಾರದ ಆದೇಶ ಕ್ರ. ಆರ್‌.ಡಿ. 649 ಎಲ್.ಜಿ.ಬಿ. 2012 ದಿನಾಂಕ 01-10-2012 ಹಾಗೂ ಪರಿಷ್ಕೃತ ಆದೇಶ 16-10-2012, 21-3-2013

2. ಈ ನಿಗಮದ ಅಧಿಕೃತ ಜ್ಞಾಪನ ಕ್ರ. ಸಮಸಂಖ್ಯೆ ದಿನಾಂಕ 18-12-2012, 29-01-2013. 21-6-2013

3. ಜಿಲ್ಲಾಧಿಕಾರಿಗಳು, ಕೋಲಾರ, ದಾವಣಗೆರೆ, ಹಾಸನ ಹಾಗೂ ಚಿಕ್ಕಬಳ್ಳಾಪುರ ಇವರ ಕೋರಿಕೆ ಪತ್ರಗಳು,

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದಿಂದ ದಿನಾಂಕ 21-6-2013 ರ ಆದೇಶದಲ್ಲಿ ಜಿಲ್ಲಾಧಿಕಾರಿಗಳಿಗೆ ಸರ್ಕಾರಿ ಜಮೀನು ಸಂರಕ್ಷಣೆಗಾಗಿ ತಂತಿ ಬೇಲಿ ನಿರ್ಮಾಣಕ್ಕಾಗಿ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಉಲ್ಲೇಖ 3 ರಲ್ಲಿ ಜಿಲ್ಲಾಧಿಕಾರಿಗಳು, ದಾವಣಗೆರೆ, ಹಾಸನ, ಕೋಲಾರ ಹಾಗೂ ಚಿಕ್ಕಬಳ್ಳಾಪೂರ ಇವರು ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆಯನ್ನು ಚುರುಕುಗೊಳಿಸಲಾಗಿದ್ದು, ಸಂರಕ್ಷಣೆಗಾಗಿ ಹೆಚ್ಚಿನ ಅನುದಾನ ಅಗತ್ಯವಾಗಿರುವುದರಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು ಸಲ್ಲಿಸಿರುವ ಕೋರಿಕೆಗಳನ್ನು ಪರಿಶೀಲಿಸಿ ಈಗಾಗಲೇ ಬಿಡುಗಡೆ ಮಾಡಿರುವ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಸೂಚಿಸುತ್ತ, ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವುದು ಅಗತ್ಯವಾಗಿರುವುದರಿಂದ ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ ಈ ಜ್ಞಾಪಕಕ್ಕೆ ಲಗತ್ತಿಸಿದ ಅನುಬಂಧ-1 ರ ಅಂಕಣ 3 ರಲ್ಲಿ ತೋರಿಸಿದ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡ ಶರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

### : ಷರತ್ತುಗಳು :

1. ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಆ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದು ಹಾಗೂ ಅನ್ಯ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.

2. ಬಿಡುಗಡೆ ಮಾಡಿರುವ ಅನುದಾನ ವೆಚ್ಚ ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯಿದೆ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

## ಅನುಬಂಧ-1

| ಅ ನಂ | ಅನುದಾನ ಬಿಡಗಡೆ ಮಾಡಿದ ಜಿಲ್ಲೆ. | ಬಿಡುಗಡೆ ಮಾಡಿದ ಅನುದಾನ ( ಲಕ್ಷ ರೂಗಳಲ್ಲಿ) |
|---|---|---|
| 1 | 2 | 3 |
| 1 | ದಾವಣಗೆರೆ | 10.00 |
| 2 | ಚಿಕ್ಕಬಳ್ಳಾಪೂರ | 10.00 |
| 3 | ಕೋಲಾರ | 30.00 |
| 4 | ಹಾಸನ | 20.00 |
| | ಒಟ್ಟು | **70.00** |

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ.
ಬೆಂಗಳೂರು